

## ನಕ್ಕುಬಿಡಿ

**ಗುಂಡ:** ನಾನು ನಿನ್ನ ತಟ್ಟೆಗೆ ಐದು ಪೂರಿ ಹಾಕ್ತೀನಿ. ನೀನು ಅವನ್ನೆಲ್ಲ ತಿಂದ ಮೇಲೆ ಏನು ಉಳಿಯುತ್ತೆ?
**ಕೃಷಿಕ್:** ಸಾಗು!

***

**ಗುಂಡ:** ಯಾಕೋ ಮದ್ವೆ ಆಗೋದಕ್ಕೆ ಡಿಲೇ ಮಾಡ್ತಾ ಇದೀಯಾ?
**ಕೃಷಿಕ್:** ನನಗೇನು ಮದ್ವೆ ಆಗ್ಬಾರ್ದು ಅಂತಿಲ್ಲ. ಆದ್ರೆ...
**ಗುಂಡ:** ಮತ್ತೇನೋ ನಿನ್ನ ಪ್ರಾಬ್ಲಂ?
**ಕೃಷಿಕ್:** ಯಾರು? ಏನು? ಯಾಕೆ? ಎಲ್ಲಿ? ಅವ್ಳ ಜೊತೆ ಯಾಕ್ ಮಾತಾಡ್ದೆ? ಎಲ್ಲೋಗಿದ್ದೆ? ಅವ್ಳ ಜೊತೆ ಯಾಕ್ ಬಂದೆ? ನಾನ್ ಬೋರ್ ಆಗ್ಬಿಟ್ನಾ? ಅವ್ಳು ಹಾಗಲ್ಲ ಅಂದ್ರೆ ಮತ್ತೆ ಅವ್ಳ ಹುಡ್ಗಿ ಅಲ್ವಾ? ನೀನ್ ಅವ್ನಾ?... ಇಂಥ ಪ್ರಶ್ನೆಗಳಿಗೆ ಉತ್ತರಿಸೋಕೆ ನನಗೆ ಇಷ್ಟ ಇಲ್ಲ.

***




ಎಂಬತ್ತು ಲಕ್ಷದ ಅಂದಾಜು ಇದೆ... ಸರ್ಕಾರಿ ಉದ್ಯೋಗ ಹಿಡಿಯೋದಕ್ಕೆ ಸಾಕಾಗ ಬಹುದು!!.

**ಗುಂಡ:** ಬೆಕ್ಕು ಯಾಕೆ ಬಾಲ ಅಲ್ಲಾಡಿಸುತ್ತೆ?
**ಕೃಷಿಕ್:** ಯಾಕಂದ್ರೆ ಆ ಬಾಲ ಬೆಕ್ಕಿನದ್ದು. ನಿಮ್ಮಪ್ಪನದ್ದಲ್ಲ.

***

**ಗುಂಡ:** ಕೃಷಿಕ್ ರಾತ್ರಿ ನಿಮ್ ಹುಡ್ಗಿ ಬೈತಿದ್ದದ್ದು ಯಾಕೆ?
**ಕೃಷಿಕ್:** ಅಲ್ಲ ಗುಂಡ... ರಾತ್ರಿ ಮಾತಾಡಿದ್ರೆ ಕುಡ್ದು ಮಾತಾಡ್ತೀಯಾ ಅಂತಾಳೆ, ಬೆಳಿಗ್ಗೆ ಮಾತಾಡಿದ್ರೆ ರಾತ್ರಿ ಕುಡ್ದಿರೋದು ಇಳ್ದಿಲ್ವಾ ಅಂತಾಳೆ. ಇನ್ನು ಯಾವಾಗ್ ಮಾತಾಡ್ಲಿ ನಾನು?

***

**ಗುಂಡ:** ಏನೋ... ಸ್ಕೂಲ್ಗಾ ಹೋಗ್ತಾ ಇರೋದು?
**ಕೃಷಿಕ್:** ಯೂನಿಫಾರ್ಮ್ ಹಾಕ್ಕೊಂಡ್ ಹನಿಮೂನ್‌ಗಾ ಹೋಗೋಕಾಗುತ್ತೆ? ಹೋಗೊಲೇ!

***

**ಗುಂಡ:** ಏನಾಯ್ತು ಶಾನು, ಕೈ ಬೆರಳಿಗೆ ಗಾಯ ಆಗಿದೆ?
**ಶಾನು:** ಹಾವ್ ಕಚ್ತು.
**ಗುಂಡ:** ಯಾವ್ ಹಾವು?
**ಶಾನು:** ಹಿಂಗೇ ಹಿಂಗೇ ಹೋಗೋ ಹಾವು.
**ಗುಂಡ:** ಅದಕ್ಕೊಂದು ಹೆಸರು ಇರುತ್ತಲ್ಲ ಅದು ಏನು?
**ಶಾನು:** ತಡಿ ಅವ್ರ ಅಪ್ಪನ್ನ ಕೇಳ್ಕೊಂಡ್ ಬರ್ತೀನಿ.

***

**ಕೃಷಿಕ್:** ಏನಕ್ಕೋ ಇಷ್ಟೊಂದು ಹೆದರಿಕೊಂಡಿದ್ದೀಯಾ?
**ಗುಂಡ:** ಏನನ್ನೋ ನೋಡಿ ಹೆದರ್ಕೊಂಡೆ!
**ಹುಡುಗಿ:** ರಾತ್ರಿ ಗುಂಡ ನೋಡಿದ್ದು ನನ್ನನ್ನೇ ಅಂತ ಎಷ್ಟು ಹೇಳಿದ್ರೂ ನಂಬ್ತಾನೇ ಇಲ್ಲ!

***

**ಗುಂಡ:** ಹುಡುಗಿ ನೋಡೋಕೆ ಹೋಗಿದ್ದಲ್ಲೋ ಏನಾಯ್ತು?
**ಕೃಷಿಕ್:** ಹುಡುಗಿ ಏನೋ ಚೆನ್ನಾಗವ್ಳೆ. ಆದ್ರೆ ಚೂರು ಕಪ್ಪು!
**ಗುಂಡ:** ಕಪ್ಪಿದ್ರೆ ಏನಾಯ್ತು ಬಿಡು. ಕಣ್ಣಿಗ್ ಒಂದ್ ಫಿಲ್ಟರ್ ಹಾಕ್ಕೊಂಡ್ರೆ ಆಯ್ತು

***

**ಅಮ್ಮ:** ಅಲ್ಲೊ, ಇಂಗ್ಲಿಷ್‌ನಲ್ಲಿ ಪಾಸ್ ಆಗಿದ್ದೀಯಾ. ಕನ್ನಡದಲ್ಲಿ ಫೇಲ್ ಆಗಿದ್ದೀಯಲ್ಲ ನಿನಗೆ ನಾಚಿಕೆ ಆಗಲ್ವಾ?
**ಮಗ:** ಅದಾ... ಇಂಗ್ಲಿಷ್ ಮಿಸ್ ಚೆನ್ನಾಗಿ ಪಾಠ ಮಾಡ್ತಾ ಇದ್ರು.
**ಅಮ್ಮ:** ಕನ್ನಡ ಮಿಸ್?
**ಮಗ:** ನೋಡೋಕೆ ಚೆನ್ನಾಗಿದ್ರು.

***

**ಗುಂಡ:** ಇದೇನೋ, ನಿಮ್ಮಣ್ಣ ಪೇಂಟ್ ಬಳಿಯೋ ಬದ್ಲು ಸೆಂಟ್ ಹೊಡ್ದವ್ನೆ ಹೊಸ ಮನೆಗೆ?
**ಕೃಷಿಕ್:** ಬೆವರು ಸುರಿಸಿ ಮನೆ ಕಟ್ಟಿದ್ದೆ ಅಲ್ವಾ ಅದ್ಕೆ.

***

**ಜಡ್ಜ್:** ಕಾರನ್ನು ನಿಧಾನವಾಗಿ ಓಡಿಸುತ್ತಿದ್ದೆ ಅನ್ನೋದಕ್ಕೆ ಏನು ಸಾಕ್ಷಿ?
**ಗುಂಡ:** ಸಾರ್, ನಾನು ನನ್ನ ಹೆಂಡತಿ ಕರೆದುಕೊಂಡು ಬರೋಕೆ ಮಾವನ ಮನೆಗೆ ಹೋಗ್ತಿದ್ದೆ.
**ಜಡ್ಜ್:** ಬಿಟ್ಟು ಬಿಡಿ ಪಾಪ ನಿಜವನ್ನೇ ಹೇಳುತ್ತಿದ್ದಾನೆ...

***

**ಸುಬ್ಬ:** ತಲೆಗೆ ಅಷ್ಟೊಂದು ಗಾಯ ಹೇಗಾಯ್ತೋ?
**ಗುಂಡ:** ನನ್ನ ಹೆಂಡ್ತಿ ಹೊಡೆದಳು.
**ಸುಬ್ಬ:** ಯಾಕೆ?
**ಗುಂಡ:** ಅವಳ ಅಪ್ಪ ಅಮ್ಮ ಬಂದಿದ್ರು. ಹೊರಗೆ ಹೋಗಿ ಏನಾದ್ರೂ ತನ್ನಿ ಅಂದ್ಲು. ನಾನು ಹೋಗಿ ಆಟೊ ತಗೊಂಡ್ ಬಂದೆ, ಅಷ್ಟೆ.!

***

**ಅಪ್ಪ:** ಮಗನೇ ಹೆಣ್ಣಿನ ಕಡೆಯವರು ಬರ್ತಿದ್ದಾರೆ, ನಾವು ಶ್ರೀಮಂತರು ಅನಿಸುವ ಹಾಗೆ ದೊಡ್ಡ ಸುಳ್ಳುಗಳನ್ನು ಹೇಳು, ತಿಳೀತಾ?
(ಹೆಣ್ಣಿನ ಕಡೆಯವರು ಬಂದು ಕುಳಿತ ಮೇಲೆ)
**ಮಗ:** ಅಪ್ಪ, ಸ್ವಲ್ಪ ಬೀಗದ ಕೀ ಕೊಡ್ತೀರಾ, ಟ್ರೇನ್ ಬಿಸಿಲಲ್ಲಿದೆ. ಶೆಡ್‌ನಲ್ಲಿ ನಿಲ್ಲಿಸಿ ಬರ್ತೀನಿ.

ಸಂಗ್ರಹ: ಮನೋಜ್ ಆರ್.

